## ವಿಚಾರಪ್ರಭ

# ವಿಶ್ವಧರ್ಮಗಳ ಪ್ರಕಾರ ದೇವರು, ಜೀವಿ, ಜಗತ್ತು ಮತ್ತು ಆಧ್ಯಾತ್ಮಿಕ ಸಾಧನೆ

## ಇಸ್ಲಾಂ ಧರ್ಮ

*ಪಿ. ನೂರ್ ಮುಹಮ್ಮದ್*

### ದೇವರು

ಇಸ್ಲಾಮ್ ಎಂಬ ಪದವು 'ಸಿಲ್ಮ್' ಎಂಬ ಅರಬ್ಬಿ ಮೂಲದಿಂದ ಬಂದಿದೆ. ಅದಕ್ಕೆ ಶಾಂತಿ, ರಕ್ಷಣೆ, ಪಾವಿತ್ರ್ಯ, ಅರ್ಪಣೆ, ಅನುಸರಣೆ ಇತ್ಯಾದಿ ಅರ್ಥಗಳಿವೆ. ಧಾರ್ಮಿಕ ಭಾಷೆಯಲ್ಲಿ ಇಸ್ಲಾಮ್ ಎಂದರೆ ದೈವೇಚ್ಛೆಗೆ ಸಂಪೂರ್ಣವಾಗಿ ಶರಣಾಗುವುದು ಮತ್ತು ಅವನ ನಿಯಮಗಳನ್ನು ಪಾಲಿಸುವುದೇ ಆಗಿದೆ.

ಮುಸ್ಲಿಮರು ಪ್ರವಾದಿ ಮುಹಮ್ಮದರನ್ನು (ಸ) ಆರಾಧಿಸುವುದಿಲ್ಲ. ಕ್ರೈಸ್ತರು, ಯಹೂದಿಗಳು ಮತ್ತು ಮಾರ್ಕ್ಸಿಸ್ಟರು ತಮ್ಮ ನಾಯಕರ ಬಗ್ಗೆ ಇರಿಸಿಕೊಂಡಿರುವ ಭಾವನೆಗಳನ್ನು ಮುಸ್ಲಿಮರು ಮುಹಮ್ಮದರ ಬಗ್ಗೆ ಹೊಂದಿಲ್ಲ. ಮುಸ್ಲಿಮರು ಕೇವಲ ಸರ್ವಲೋಕ ಪ್ರಭುವಾದ ಅಲ್ಲಾಹನನ್ನು ಆರಾಧಿಸುತ್ತಾರೆ. 'ಅಲ್ಲಾಹ್' ಎಂದರೆ ಅರಬ್ಬೀ ಭಾಷೆಯಲ್ಲಿ 'ಆರಾಧ್ಯ' ಎಂದರ್ಥ. ಅದಕ್ಕೆ ಪರ್ಯಾಯ ಪದವಿಲ್ಲ. ಪ್ರವಾದಿ ಮುಹಮ್ಮದರು ದಿವ್ಯವಚನಗಳನ್ನು ಬೋಧಿಸಿ ಆದರ್ಶ ಯೋಗ್ಯಜೀವನ ಸಾಧಿಸಲು ಅಲ್ಲಾಹ ನೇಮಿಸಿದ ಓರ್ವ ನಶ್ವರ ಮಾನವರಾಗಿದ್ದರು. ಅವರು ದೈವಭಕ್ತಿ, ಪರಿಪೂರ್ಣತೆ ಮತ್ತು ಪಾವಿತ್ರ್ಯಗಳಲ್ಲಿ ಇತಿಹಾಸದ ಅತ್ಯುತ್ತಮ ಮಾದರಿಯಾಗಿದ್ದರು. ಧಾರ್ಮಿಕ ವಿಕಾಸ ಪ್ರಕ್ರಿಯೆಯ ಅಂತಿಮ ರೂಪವು ಅವರ ಮೂಲಕ ಅವತರಣಗೊಂಡಿದೆ. ದೇವನೇ ಇಸ್ಲಾಮಿನ ಸ್ಥಾಪಕನಾಗಿದ್ದಾನೆ. ಅದು ಆದಿಮಾನವ ಆದಮರ (Adam) ಕಾಲದಲ್ಲೇ ಆರಂಭಗೊಂಡಿದೆ. ಇಸ್ಲಾಂ ಆರಂಭದಿಂದ ಇಲ್ಲಿಯ ತನಕ ಒಂದಿಲ್ಲೊಂದು ರೀತಿಯಿಂದ ನೆಲೆನಿಂತಿರುವ ಧರ್ಮ. ಅದು ಲೋಕಾಂತ್ಯದವರೆಗೆ ಶಾಶ್ವತವಾಗಿ ಉಳಿಯುವುದು.

ಈ ಧರ್ಮದ ನೈಜ ಹೆಸರು ಇಸ್ಲಾಂ ಎಂದು. ಅದರ ಅನುಯಾಯಿಗಳು ಮುಸ್ಲಿಮರು. ದೇವನ ಆದೇಶಗಳ ಅನುಸರಣೆ ಮತ್ತು ಅವುಗಳನ್ನು ಸಂಪೂರ್ಣ ಆಚರಣೆಗೆ ತರುವುದೇ ಇಸ್ಲಾಮ್ ಧರ್ಮದ ತಿರುಳು. ಆದರೆ ಹೆಚ್ಚಿನವರು ಭಾವಿಸಿರುವಂತೆ ಇಸ್ಲಾಮ್ ವೈಯಕ್ತಿಕ ಸ್ವಾತಂತ್ರ್ಯದ ನಿಷೇಧವಾಗಲೀ ಅಥವಾ ವಿಧಿಯ ಕೈಗೊಂಬೆಯಾಗುವುದಾಗಲೀ ಅಲ್ಲ. ಆ ರೀತಿ ಭಾವಿಸುವವರು ವಾಸ್ತವದಲ್ಲಿ ಅದರ ದೈವಕಲ್ಪನೆಯನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಇಸ್ಲಾಮ್ ಧರ್ಮವು ಭಗವಂತನನ್ನು ಅಪಾರ ಕರುಣಾಳು, ದಯಾಮಯ, ಸ್ನೇಹನಿಧಿ, ಮಾನವಕುಲದ ಬಗ್ಗೆ ಕಳಕಳಿ ಮತ್ತು ಆತನ ಸೃಷ್ಟಿಗಳಲ್ಲಿ ವಾತ್ಸಲ್ಯವಿರುವ ಯುಕ್ತಿಜ್ಞನೆಂದು ವರ್ಣಿಸಿದೆ. ದೈವೇಚ್ಛೆಯು ಹಿತ ಮತ್ತು ಔದಾರ್ಯದಿಂದ ಕೂಡಿದ್ದು, ಭಗವಂತನು ಪ್ರವಾದಿಗಳ ಮೂಲಕ ನೀಡಿರುವ ಎಲ್ಲಾ ನಿಯಮ ನಿರ್ದೇಶನಗಳು ಮಾನವ ಕುಲದ ಉನ್ನತ ಹಿತಾಸಕ್ತಿಗಳಿಗೆ ಬದ್ಧವಾಗಿವೆ.

> **ಇರುಳಿನ ಅಂಧಕಾರದಲ್ಲಿಯೂ, ಹಗಲಿನ ಪ್ರಕಾಶದಲ್ಲಿಯೂ ಇರುವುದೆಲ್ಲವೂ ಅಲ್ಲಾಹನದೇ. ಅವನು ಸರ್ವಶ್ರುತನೂ ಸರ್ವಜ್ಞನೂ ಆಗಿದ್ದಾನೆ... ಪೂರ್ವವೂ ಪಶ್ಚಿಮವೂ ಅಲ್ಲಾಹನದು. ನೀನೆತ್ತ ತಿರುಗಿದರೂ ಅತ್ತ ಕಡೆ ಇರುವುದು ಅಲ್ಲಾಹನ ಮುಖವೇ. ಅಲ್ಲಾಹನು ನಿಮ್ಮನ್ನು ಕೈಬಿಟ್ಟರೆ ನಿಮ್ಮ ನೆರವಿಗೆ ನಿಲ್ಲುವವರು ಯಾರು?**
>
> **–ಕುರ್‌ಆನ್**

### ಜೀವಿ

ಅಲ್ಲಾಹನ ಪವಿತ್ರ ನಿಯಮಗಳನ್ನು ಅನುಸರಿಸುತ್ತಾ ಆತನ ಉತ್ಕಟ ಇಚ್ಛೆಗೆ ಶರಣಾಗುವುದರಿಂದ ಶಾಂತಿ ನೆಮ್ಮದಿ ಲಭ್ಯವಾಗುತ್ತದೆ. ಒಬ್ಬ ವ್ಯಕ್ತಿ ಒಂದೆಡೆ ತನ್ನ ಮತ್ತು ತನ್ನ ಸಂಗಡಿಗರ ಮಧ್ಯೆ ಮತ್ತು ಇನ್ನೊಂದೆಡೆ ಮಾನವಕುಲ ಮತ್ತು ದೇವನ ಮಧ್ಯೆ ಶಾಂತಿ ಸ್ಥಾಪಿಸಲು ಅದು ಅವನನ್ನು ಶಕ್ತನನ್ನಾಗಿ ಮಾಡುತ್ತದೆ; ನಿಸರ್ಗದ ವಿಭಿನ್ನ ಘಟಕಗಳಲ್ಲಿ ಸಾಮರಸ್ಯವನ್ನು ಮೂಡಿಸುತ್ತದೆ. ಇಸ್ಲಾಮಿನ ಬೋಧನೆಯಂತೆ ಮಾನವನ ಹೊರತು ಇತರೆಲ್ಲಾ ಚರಾಚರಗಳು ಭಗವಂತನ ನಿರ್ದಿಷ್ಟ ನಿಯಮಗಳಿಂದ ನಿಯಂತ್ರಿಸಲ್ಪಡುತ್ತವೆ. ಈ ಭೌತಿಕ ಲೋಕವು ಸಂಪೂರ್ಣವಾಗಿ ಮತ್ತು ಅನಿವಾರ್ಯವಾಗಿ ದೇವನಿಗೆ ಶರಣಾಗಿ ಆತನ ಕಾನೂನಿಗೆ ವಿಧೇಯವಾಗಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಅವೆಲ್ಲವೂ ಇಸ್ಲಾಮ್ ಸ್ಥಿತಿಯಲ್ಲಿವೆ ಅಥವಾ ಮುಸ್ಲಿಮ್ (ಬೇಷರತ್ ಆಜ್ಞಾಪಾಲಕ)ಗಳಾಗಿವೆ. ಮಾನವೇತರ ವಸ್ತುಗಳಿಗೆ ಸ್ವಯಂ ಆಯ್ಕೆಯ ಸ್ವಾತಂತ್ರ್ಯವಿಲ್ಲ ಮತ್ತು ಅವುಗಳು ಸ್ವಂತ ಅಭಿಲಾಷೆಯಂತೆ ಜೀವಿಸುವಂತಿಲ್ಲ. ಬದಲಾಗಿ ಅವೆಲ್ಲವೂ ಭಗವಂತನು ವಿಧಿಸಿದ ಸೃಷ್ಟಿಯ ಕಾನೂನುಗಳಿಗೆ ಬದ್ಧವಾಗಿವೆ. ಇದು ಅರ್ಪಣೆ ಮತ್ತು ವಿಧೇಯತೆಯ ನಿಯಮವಾಗಿದೆ. ಅಲ್ಲಾಹನು ಸ್ವಯಂ ಆಯ್ದುಕೊಳ್ಳುವ ಸ್ವಾತಂತ್ರ್ಯ, ಸಾಮರ್ಥ್ಯ ಮತ್ತು ಬುದ್ಧಿ ಸ್ವಾತಂತ್ರ್ಯವನ್ನು ಕೇವಲ ಮಾನವನಿಗೆ ನೀಡಿದ್ದಾನೆ. ಸ್ವಾತಂತ್ರ್ಯವನ್ನು ನೀಡಿರುವುದರೊಂದಿಗೆ ದೈವ ಕಾನೂನುಗಳನ್ನು ಪಾಲಿಸುವಂತೆ ಮತ್ತು ಆತನ ಇಚ್ಛೆಗೆ ಶರಣಾಗುವಂತೆ ಅವನಿಗೆ ಆದೇಶಿಸಿದ್ದಾನೆ. ಜೀವಿಯು ಅಲ್ಲಾಹನ ಆಜ್ಞೆಗಳಿಗೆ ಶರಣಾದಾಗ ಮಾತ್ರ ಆತನಿಗೂ ದೇವನಿಗೂ ಮತ್ತು ದೇವನಿಗೆ ಸಂಪೂರ್ಣವಾಗಿ ವಿಧೇಯವಾದ ನಿಸರ್ಗದ ಇತರ ಘಟಕಗಳಿಗೂ ಐಕ್ಯ ಮತ್ತು ಸಾಮರಸ್ಯ ಉಂಟಾಗುತ್ತದೆ. ಆಗ

ಆತನು, ವಾಸ್ತವಿಕತೆಗೆ ನಿಕಟನಾಗಿ ಪ್ರಪಂಚದ ಇತರ ಘಟಕಗಳೊಡನೆ ಹೆಚ್ಚು ಸಾಮರಸ್ಯವನ್ನು ಬೆಳೆಸಿಕೊಳ್ಳುತ್ತಾನೆ. ಅದಕ್ಕೆ ಬದಲಾಗಿ ಮಾನವನು ಭಗವಂತನಲ್ಲಿ ಅವಿಧೇಯತೆಯನ್ನು ಆಯ್ದುಕೊಂಡರೆ, ಸನ್ಮಾರ್ಗದಿಂದ ಭ್ರಷ್ಟನಾಗಿ ವೈರುಧ್ಯದಲ್ಲಿ ಸಿಲುಕುತ್ತಾನೆ. ಅವಲ್ಲದೆ ನಿಯಮ ನಿರ್ಮಾತೃವಾದ ಅಲ್ಲಾಹನ ಕೋಪ ಮತ್ತು ಶಿಕ್ಷೆಗೆ ಗುರಿಯಾಗುತ್ತಾನೆ.

## ಜಗತ್ತು

ದೈವೇಚ್ಛೆಗೆ ಶರಣಾಗುವುದು ಮತ್ತು ದೇವನ ನಿಯಮಗಳ ಅನುಸರಣೆಯೇ ಇಸ್ಲಾಂ. ಅದು ದೇವನು ವಿಶಿಷ್ಟವಾಗಿ ಆಯ್ಕೆ ಮಾಡಿ ಕಳುಹಿಸಿದ ಹಿಂದಿನ ಎಲ್ಲ ಪ್ರವಾದಿಗಳ ಸಂದೇಶ ಸಾರವಾಗಿದೆ. ಹಾಗೆಂದೇ ಮುಸ್ಲಿಮರು ಮುಹಮ್ಮದರಿಗಿಂತ (ಸ) ಹಿಂದಿನ ಪ್ರವಾದಿಗಳನ್ನು ಯಾವ ಭೇದಭಾವಗಳಿಲ್ಲದೆ ಅಂಗೀಕರಿಸುತ್ತಾರೆ. ಧರ್ಮವು ಮಾನವನಿಗೆ ಜೀವನದ ವಿಶಾಲ ರಂಗಗಳಲ್ಲಿ ಪರಿಣತಿಗೆ ಆವಶ್ಯಕವಾಗುವ ದಯೆ, ಭರವಸೆ, ಪ್ರಾಮಾಣಿಕತೆ, ಸತ್ಯಸಂಧತೆ, ಒಳಿತು, ಹಿತಾಕಾಂಕ್ಷೆ, ಧೈರ್ಯ, ಸಹನೆ ಇತ್ಯಾದಿಗಳನ್ನು ಬೋಧಿಸಿ, ಅವನ ವ್ಯಕ್ತಿತ್ವ ನಿರ್ಮಾಣ ಮಾಡುತ್ತದೆ. ಅದು ಮಾತ್ರವಲ್ಲ, ನೈಜಧರ್ಮವು ಮಾನವರಿಗೆ ಭಯ ಮತ್ತು ಆತ್ಮಶೋಷಣೆಯ ವಿರುದ್ಧ ವಾಸ್ತವಿಕ ನೆಲೆಗಟ್ಟಿನಲ್ಲಿ ಧೈರ್ಯವನ್ನು ನೀಡುತ್ತದೆ; ದೈವಸಹಾಯ ಮತ್ತು ದೇವನೊಡನೆ ವ್ಯಕ್ತಿಗಿರುವ ಅಭೇದ ಸಂಬಂಧದ ಭರವಸೆಯನ್ನು ಕೂಡ ನೀಡುತ್ತದೆ. ಅದು ಮಾನವನಿಗೆ ಶಾಂತಿ ಮತ್ತು ಭದ್ರತೆಯನ್ನು ಒದಗಿಸಿ, ಆತನ ಜೀವನವನ್ನು ಅರ್ಥಪೂರ್ಣಗೊಳಿಸುತ್ತದೆ. ಇವು ನೈಜಧರ್ಮವು ಮಾನವೀಯತೆಗೆ ನೀಡುವ ಕೊಡುಗೆಗಳಾಗಿವೆ. ಇಸ್ಲಾಮಿನ ಧರ್ಮ ಕಲ್ಪನೆಯೂ ಅದೇ ಆಗಿದೆ.

ಮಾನವ ಕುಲದ ಇಂದಿನ ಸ್ಥಿತಿಯು ಅತ್ಯಂತ ಶೋಚನೀಯವಾಗಿದೆ. ಸಜ್ಜನರು ಮತ್ತು ದೈವಭಕ್ತರು ಇದರ ಬಗ್ಗೆ ತೀವ್ರವಾಗಿ ಗಮನ ಹರಿಸಬೇಕಾಗಿದೆ. ಹಿಂದೆ, ಮಾನವರ ನಡುವಣ ಪರಸ್ಪರ ಅಸಹಿಷ್ಣುತೆ ಮತ್ತು ದ್ವೇಷವೆ ಮಾನವಕುಲ ಎದುರಿಸುತ್ತಿರುವ ಪ್ರಮುಖ ಬೆದರಿಕೆಯಾಗಿತ್ತು. ಇದು ಅವರನ್ನು ವೈಯಕ್ತಿಕ ಸ್ವಾತಂತ್ರ್ಯದ ವಿರೋಧ, ಪೂರ್ವಾಗ್ರಹ ಮತ್ತು ಭ್ರಷ್ಟತೆಗೆ ಒಯ್ದಿತ್ತು. ಇಂದು ಈ ವಿಕೃತಿಗಳು ಹೊಸ ರೂಪ ತಾಳಿವೆ. ಅವುಗಳಿಂದ ಮಾನವ ಕುಲದ ವಿಭಿನ್ನ ಪಂಗಡಗಳು ವಿಭಿನ್ನ ಧ್ರುವಗಳತ್ತ ಚಲಿಸುತ್ತಿವೆ; ಲೌಕಿಕ ಸುಖಸಮೃದ್ಧಿಗಾಗಿ ಪೈಪೋಟಿ ನಡೆಯುತ್ತಿದೆ. ಲೌಕಿಕ ಸಂಪನ್ಮೂಲಗಳ ಸಂಪಾದನೆಯಿಂದ ಎಲ್ಲವೂ ಈಡೇರುವುದೆಂದು ಮಾನವರು ಭಾವಿಸುತ್ತಾರೆ. ಇನ್ನೊಂದೆಡೆ ಮೂಢನಂಬಿಕೆಯಿಂದ ಮಾನವನು ಸ್ವಾತಂತ್ರ್ಯಹೀನನೂ ಭ್ರಾಂತನೂ ಆಗುತ್ತಾನೆ. ಲೌಕಿಕ ಮೋಹ ಹೆಚ್ಚಿದಂತೆ ಮಾನವನಲ್ಲಿ ದುರಾಸೆ ಅದಮ್ಯವಾಗುತ್ತದೆ. ಆಗ ಧರ್ಮ ಮತ್ತು ಆಧ್ಯಾತ್ಮಿಕತೆಗಳು ಕೇವಲ ಮೂಢನಂಬಿಕೆಗಳ ಕಂತೆಯಾಗುತ್ತವೆ.

ಲೌಕಿಕ ಮತ್ತು ಆಧ್ಯಾತ್ಮಿಕ – ಈ ಎರಡೂ ರಂಗಗಳ

> ಮನುಷ್ಯನ ಒಂದು ತುದಿ ದೇವರು;
> ದೇವರ ಒಂದು ತುದಿ ಮನುಷ್ಯ.
> ದೇವರು ಮತ್ತು ಮನುಷ್ಯರು ಇರುವುದು ಒಂದೇ ಸ್ಥಳದಲ್ಲಿ.
> ಅವರಿಬ್ಬರಿಗೂ ಸಮಾನವಾದ ಸಂಕೇತ ಇರುವುದು.
>
> –ಅಮೀನ್–ಅಲ್–ದಿನ್ ಅಲಾ (ಸೂಫೀ ಸಂತ)

ಮುಕ್ತ ಅನ್ವೇಷಣೆಗಳು ಜನಸಾಮಾನ್ಯರನ್ನು ಭ್ರಾಂತಗೊಳಿಸುವಂತಿವೆ. ಎರಡರಲ್ಲೂ ಪರಸ್ಪರ ಹೊಂದಿಕೊಳ್ಳುವ ಯಾವ ಅಂಶವೂ ಇಲ್ಲವೆಂದು ಸಂಶೋಧಕರು ಭಾವಿಸುತ್ತಿರುವುದೇ ಅದಕ್ಕೆ ಕಾರಣ. ಆಧ್ಯಾತ್ಮಿಕ ಸಂಶೋಧನೆ ಮತ್ತು ಲೌಕಿಕ ಪ್ರಗತಿಗಳನ್ನು ಪರಸ್ಪರ ಸಂತುಲಿತಗೊಳಿಸುವ ಮಾರ್ಗಗಳಿದ್ದರೆ ಮೇಲಿನ ಸಮಸ್ಯೆಗೆ ಸಮನ್ವಯ ಪರಿಹಾರ ಸುಲಭವಾಗುವುದು. ಈ ಹಿನ್ನೆಲೆಯಲ್ಲಿ ಇಸ್ಲಾಮಿನ ವಿಶ್ವಕಲ್ಪನೆಯು ಬಹಳ ಪ್ರಶಸ್ತವಾಗಿದೆ. ಮಧ್ಯಮ ಮಾರ್ಗ ಅಥವಾ ಮಿತವಾದವನ್ನು ಇಸ್ಲಾಂ ಒಂದು ಮೂಲತತ್ತ್ವವಾಗಿ ಸ್ವೀಕರಿಸಿದೆ. ದೇವ, ಮಾನವ ಮತ್ತು ಜೀವನಗಳ ನಡುವಣ ಪರಸ್ಪರ ಸಂಬಂಧವನ್ನು ಇಷ್ಟೊಂದು ಸುಲಲಿತವಾಗಿ ಬೇರೆ ಯಾವ ಸಿದ್ಧಾಂತದಲ್ಲೂ ವ್ಯಾಖ್ಯಾನಿಸಿಲ್ಲ. ಮಾನವನನ್ನು ದೇವನೆಂದು ಇಸ್ಲಾಂ ವಾದಿಸುವುದಿಲ್ಲ. ಹಾಗೆಂದು, ಆತ ಪಾಪಿ ಮತ್ತು ನೀಚನೆಂದೂ ವಾದಿಸುವುದಿಲ್ಲ. ಜೀವನ ಕೇವಲ ಮೋಹಮಯವೆಂದೂ ಹೇಳುವುದಿಲ್ಲ. ಅದೇ ವೇಳೆ ಜೀವನವೆಂದರೆ ಎಲ್ಲಾ ಲೌಕಿಕ ಸುಖಭೋಗಗಳಿಗೆ ಅವಕಾಶವಿರಬೇಕಾದ ಸಂದರ್ಭವೆಂದೂ ಇಸ್ಲಾಂ ಹೇಳುವುದಿಲ್ಲ. ಲೌಕಿಕ ಮತ್ತು ಆಧ್ಯಾತ್ಮಿಕ – ಈ ಎರಡೂ ಪ್ರಕಾರಗಳಲ್ಲಿ ಮಧ್ಯಮಾರ್ಗವನ್ನು ಅಂಗೀಕರಿಸುವುದೇ ಇಸ್ಲಾಮಿನ ಈ ಲೋಕದಲ್ಲಿ ಬಾಳುವುದು ಹೇಗೆ ಎನ್ನುವುದರ ಕಲ್ಪನೆಯಾಗಿದೆ.

ಇಸ್ಲಾಮಿನ ಜಗತ್ತಿನ ಕಲ್ಪನೆಯನ್ನು ಸಂಕ್ಷಿಪ್ತದಲ್ಲಿ ಹೀಗೆ ಕ್ರೋಡೀಕರಿಸಬಹುದು: ಈ ಲೋಕವು ದೇವನು ಕೆಲವು ವಿಶಿಷ್ಟ ಧ್ಯೇಯಗಳಿಗಾಗಿ ಸೃಷ್ಟಿಸಿರುವ ಏಕ ಅಸ್ತಿತ್ವವಾಗಿದೆ. ಈ ಲೋಕದ ಘಟನೆಗಳು ಆಕಸ್ಮಿಕವಾಗಿ ನಡೆಯುವುದಿಲ್ಲ. ಬದಲಾಗಿ ಸೃಷ್ಟಿಕರ್ತನ ಆಜ್ಞೆಯಂತೆ ನಡೆಯುತ್ತವೆ. ಮಾನವನನ್ನು ದೇವನೇ ಸೃಷ್ಟಿಸಿದನು. ಮಾನವನು ದೇವನ ಪ್ರತಿನಿಧಿ. ಭೂಮಿಯನ್ನು ಆತನಿಗೆ ಅಧೀನಗೊಳಿಸಲಾಗಿದೆ. ಜ್ಞಾನವು ಮಾನವನಿಗೆ ಸ್ವಯಂಲಭ್ಯವಾಗಿದ್ದು ಅದು ಆತನ ವ್ಯಕ್ತಿತ್ವದ ಒಂದು ಭಾಗವಾಗಿದೆ. ಈ ಗುಣವೈಶಿಷ್ಟ್ಯವೇ ಮಾನವನನ್ನು ದೇವರ ಪ್ರತಿನಿಧಿಯಾಗಿ ಮಾಡಿ, ಇತರ ಚರಾಚರ ವಸ್ತುಗಳಿಗಿಂತ ವಿಶಿಷ್ಟಗೊಳಿಸಿದೆ. ಮಾನವನು ಸ್ವತಂತ್ರ ಇಚ್ಛೆಗಳಿರುವ ಸೃಷ್ಟಿಯಾಗಿದ್ದಾನೆ. ಆತನಿಗೆ ಒಳಿತು–ಕೆಡುಕುಗಳನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯವಿದೆ. ಮಾನವನು ತನ್ನ ತಪ್ಪುಗಳಿಗೆ ತಾನೇ ಹೊಣೆಗಾರನಾಗಿದ್ದಾನೆ. ಪಾಪ ಮಾಡಿದರೂ ಮಾನವನಿಗೆ ಪಾಪ ವಿಮೋಚನೆಯ ಅವಕಾಶವಿದೆ. ಏಕೆಂದರೆ, ಮಾನವನು ದೇವನ ಸರ್ವೋತ್ತಮ ಸೃಷ್ಟಿಯಾಗಿದ್ದಾನೆ ಮತ್ತು ದೇವನ ಏಕತೆ ಮತ್ತು ಮಾನವ ಕುಲದ ಏಕತೆಗಳ ಮಧ್ಯೆ ಗಾಢ ಸಂಬಂಧವಿದೆ.

## ಆಧ್ಯಾತ್ಮಿಕ ಸಾಧನೆ

ಮಾನವೀಯ ಬೇಡಿಕೆಗಳ ಈಡೇರಿಕೆ ಮತ್ತು ಆಧ್ಯಾತ್ಮಿಕ ಧ್ಯೇಯ ಸಾಧನೆಗಾಗಿ ನಾಲ್ಕು ಪ್ರಮುಖ ಅನುಷ್ಠಾನ ಕರ್ಮಗಳನ್ನು ಇಸ್ಲಾಂ ಕಡ್ಡಾಯಗೊಳಿಸಿದೆ: **ನಮಾಝ್, ಉಪವಾಸ ವ್ರತ, ಝಕಾತ್ ಮತ್ತು ಹಜ್**. ಅನುಷ್ಠಾನ ಕರ್ಮವಿಲ್ಲದ ವಿಶ್ವಾಸ ನಿಷ್ಫಲ. ಅನುಷ್ಠಾನವೇ ವಿಶ್ವಾಸವನ್ನು ಸಕ್ರಿಯ ಮತ್ತು ಸಫಲಗೊಳಿಸುವ ಏಕೈಕ ಮಾರ್ಗ. ಅದು ವಿಶ್ವಾಸಕ್ಕೆ ಭದ್ರತೆ ನೀಡುತ್ತದೆ. ಹಾಗೆಯೇ ಪ್ರಭಾವಶಾಲಿ ಪಾಪನಿರೋಧಕ ಶಕ್ತಿಯೂ ಆಗಿದೆ.

ಇಸ್ಲಾಮಿನ ವಿಶ್ವಾಸ ಮತ್ತು ಅನುಷ್ಠಾನದ ಪರಸ್ಪರ ಸಂಬಂಧಕ್ಕೆ ಧರ್ಮದ ಎಲ್ಲ ರಂಗಗಳಲ್ಲಿಯೂ ನಿರ್ಣಾಯಕ ಪ್ರಭಾವವಿದೆ. ಆತ್ಮ, ದೇಹ, ಆಧ್ಯಾತ್ಮಿಕತೆ, ಭೌತಿಕತೆ, ಧರ್ಮ, ಜೀವನ – ಇವುಗಳಲ್ಲಿ ಇಸ್ಲಾಮ್ ಯಾವ ರೀತಿಯ ವಿಂಗಡನೆಯನ್ನೂ ಅಂಗೀಕರಿಸುವುದಿಲ್ಲ. ಮಾನವ ಪ್ರಕೃತಿಗೆ ಯಥಾಯೋಗ್ಯ ರೀತಿಯಲ್ಲಿ ಇಸ್ಲಾಮ್ ಮಾನ್ಯತೆ ನೀಡುತ್ತದೆ. ಮಾನವನ ಆಧ್ಯಾತ್ಮಿಕ ಮತ್ತು ಭೌತಿಕ ಅಸ್ತಿತ್ವದಲ್ಲಿ ಇಸ್ಲಾಮ್ ಅಗಾಧ ಆಸಕ್ತಿ ವಹಿಸುತ್ತದೆಯಾದ್ದರಿಂದ, ವೈಯಕ್ತಿಕ ಮತ್ತು ಸಾಮೂಹಿಕ ಜೀವನದಲ್ಲಿ ಅದು ಸಮರ್ಥವಾಗಿ ಪರಿಣಾಮ ಬೀರುತ್ತದೆ. ಇಸ್ಲಾಮಿನ ಪ್ರಕಾರ, ದೇವಸಂಪ್ರೀತಿ ಮತ್ತು ಪರಲೋಕ ಮೋಕ್ಷವೇ ವೈಯಕ್ತಿಕ ಮತ್ತು ಸಾಮೂಹಿಕ ಜೀವನಗಳ ಅಂತಿಮ ಗುರಿಗಳಾಗಿವೆ.

**ನಮಾಝ್** ಇಸ್ಲಾಂ ಧರ್ಮದ ಬುನಾದಿಯಾಗಿದೆ. ಆದ್ದರಿಂದ ನಮಾಝ್ ಅನ್ನು ನಿರ್ಲಕ್ಷಿಸುವ ಮುಸ್ಲಿಮನು ಘೋರ ಅಪರಾಧಿಯಾಗುತ್ತಾನೆ. ನಮಾಝ್ ಕೇವಲ ದೈಹಿಕ ಕ್ರಿಯೆ ಅಥವಾ ಪವಿತ್ರ ಗ್ರಂಥದ ಯಾಂತ್ರಿಕ ಪಠಣವಲ್ಲ. ಅದು ಏಕಾಗ್ರತೆ, ಆಧ್ಯಾತ್ಮಿಕ ಉಪಾಸನೆ, ನೈತಿಕ ಉನ್ನತಿ ಮತ್ತು ದೈಹಿಕ ವ್ಯಾಯಾಮಗಳೆಲ್ಲವೂ ಸಂಯೋಜಿತವಾಗಿರುವ ಅಸಾಮಾನ್ಯ ಮತ್ತು ಅನುಪಮ ಕ್ರಮವಾಗಿದೆ. ಅದು ದೇಹದ ಪ್ರತಿಯೊಂದು ಅವಯವವೂ ಆತ್ಮನೊಂದಿಗೆ ಬೆರೆತು, ಆತ್ಮವು ದೇವಸ್ತುತಿ ಮತ್ತು ದಿವ್ಯ ಉಪಾಸನೆಯಲ್ಲಿ ತಲ್ಲೀನವಾಗುವ ಪರಿಪೂರ್ಣ ಇಸ್ಲಾಂ ಅನುಷ್ಠಾನವಾಗಿದೆ.

**ಉಪವಾಸ ವ್ರತವು** ಆತ್ಮಸಂಸ್ಕಾರದ ವಿಶಿಷ್ಟ ಆರಾಧನಾ ಕರ್ಮವಾಗಿದೆ. ಉಪವಾಸವೆಂದರೆ ಬೆಳಗ್ಗೆಯಿಂದ ರಾತ್ರೆಯವರೆಗೆ ಅನ್ನಪಾನೀಯಗಳು, ಧೂಮಪಾನ ಮತ್ತು ಲೈಂಗಿಕ ಸಂಸರ್ಗಗಳನ್ನು ತೊರೆಯುವುದಾಗಿದೆ. ಇಸ್ಲಾಮಿನ ಸಂವಿಧಾನವಾಗಿರುವ ಪವಿತ್ರ ಕುರ್‌ಆನ್ ಅವತೀರ್ಣಗೊಂಡ ರಮಝಾನ್ ತಿಂಗಳಲ್ಲಿ ಉಪವಾಸವ್ರತವನ್ನು ಆಚರಿಸಲಾಗುತ್ತದೆ. ಅದರಿಂದ ಅನೇಕ ಅಮೂಲ್ಯ ಸತ್ಫಲಗಳು ಮನುಷ್ಯನಿಗೆ ಸಿದ್ಧಿಯಾಗುತ್ತವೆ. ಅದು ನಿಷ್ಕಳಂಕ ದೈವಶ್ರದ್ಧೆಯನ್ನು ಮಾನವರಿಗೆ ಕಲಿಸುತ್ತದೆ; ಸತ್ಯನಿಷ್ಠವಾದ ದೈವಭಕ್ತಿಯಲ್ಲಿ ಮಾನವನನ್ನು ಪ್ರಜ್ಞಾವಂತನನ್ನಾಗಿ ಮಾಡುತ್ತದೆ; ಮಾನವನ ಆತ್ಮಸಾಕ್ಷಿಯನ್ನು ಶುದ್ಧಗೊಳಿಸುತ್ತದೆ; ಸಹನೆ ಮತ್ತು ನಿಸ್ವಾರ್ಥತೆಯನ್ನು ಬೆಳೆಸುತ್ತದೆ; ಶಿಸ್ತು ಮತ್ತು ನಿಯಂತ್ರಣ ಶಕ್ತಿಯನ್ನು ನೀಡುತ್ತದೆ; ಮಾನವರಲ್ಲಿ ಸಹೋದರತೆಯನ್ನು, ಸಾಮಾಜಿಕ ಪ್ರಜ್ಞೆಯನ್ನು ಸಮಾನತೆಯನ್ನು ಬೆಳೆಸುತ್ತದೆ. **ಝಕಾತ್** ಅಥವಾ ಕಡ್ಡಾಯ ದಾನವು ಮಾನವ ಸಂಪತ್ತು, ಧನ, ಮನಗಳ ಶುದ್ಧೀಕರಣವಾಗಿದೆ. ಝಕಾತ್ ದುರ್ಬಲರ ಸಮಸ್ಯೆಗಳನ್ನು ಪರಿಹರಿಸುತ್ತದೆ. ದೌರ್ಭಾಗ್ಯವಂತರಿಗೆ ಅದು ಸಾಂತ್ವನದಾಯಕವಾಗಿದೆ. ಅದು ವ್ಯಕ್ತಿ ಮತ್ತು ಸಮಾಜಗಳ ನಡುವಣ ಪರಸ್ಪರ ಆಧ್ಯಾತ್ಮಿಕ ಮತ್ತು ಮಾನವೀಯ ಸಂಬಂಧ ಹಾಗೂ ಪ್ರತಿಸ್ಪಂದನಗಳ ಸಂಕೇತವಾಗಿದೆ. **ಹಜ್** ಕರ್ಮವು ಇಸ್ಲಾಮಿನ ಸಾರ್ವತ್ರಿಕತೆ ಮತ್ತು ಮುಸ್ಲಿಮರ ಸಮಾನತೆ ಸಹೋದರತೆಗಳ ಪ್ರತ್ಯಕ್ಷ ದರ್ಶನವಾಗಿದೆ. ಹಜ್ ದೈವಿಕ ಸುಧಾರಣೆ ಮತ್ತು ಆತ್ಮೋನ್ನತಿಯ ಒಂದು ಕರ್ಮ; ಭಯ, ಭಕ್ತಿ ಮತ್ತು ಶಿಸ್ತನ್ನು ಜೀವನದಲ್ಲಿ ಪ್ರತಿಬಿಂಬಿಸುವ ಕರ್ಮ; ಮಾನವೀಯ ಮೌಲ್ಯಗಳನ್ನು ಸುದೃಢಗೊಳಿಸುವ ಸ್ಫೂರ್ತಿದಾಯಕ ಕರ್ಮ. ■

---

## ದೇವರು ಕಳಿಸಿದ ರೊಟ್ಟಿಗಳು!

ಸೂಫಿ ಸಂತ ಮಹಿಳೆ ರಬಿಯಾ ಬಳಿಗೆ ಇಬ್ಬರು ಅತಿಥಿಗಳು ಬಂದರು. ಇಬ್ಬರಿಗೂ ಹಸಿವೆ. ಅವರಿಬ್ಬರೂ ಊಟಕ್ಕೆ ಕುಳಿತರು. ಆಗ ಒಬ್ಬ ಭಿಕ್ಷುಕ ಬಂದ. ರಬಿಯಾ ತನ್ನಲ್ಲಿದ್ದ ಎರಡು ರೊಟ್ಟಿಗಳನ್ನು ಅವನಿಗೆ ಕೊಟ್ಟಳು. ಆ ಅತಿಥಿಗಳಿಗೆ ನಿರಾಶೆಯಾಯಿತು. ಅದೇ ಸಮಯದಲ್ಲಿ, ಒಬ್ಬಳು ಸೇವಕಿ ಬಂದಳು. ಅವಳು ತನ್ನ ಒಡತಿ ಕಳಿಸಿಕೊಟ್ಟ ಬಿಸಿ ಬಿಸಿ ರೊಟ್ಟಿಗಳನ್ನು ತಂದಿದ್ದಳು. ರಬಿಯಾ ಅವನ್ನು ಎಣಿಸಿ ನೋಡಿದಳು. ಹದಿನೆಂಟು ರೊಟ್ಟಿಗಳು! "ನಿನ್ನ ಒಡತಿ ತಪ್ಪು ಮಾಡಿರಬೇಕು. ಅದು ಇಲ್ಲಿಗೆ ಬಂದಿದ್ದಲ್ಲ" ಎಂದು ಹೇಳಿ ಅವುಗಳನ್ನು ರಬಿಯಾ ವಾಪಸು ಕಳಿಸಿಬಿಟ್ಟಳು. ಸೇವಕಿ ಎಷ್ಟು ಹೇಳಿದರೂ ಕೇಳಲಿಲ್ಲ. ರೊಟ್ಟಿಗಳನ್ನು ತರುವಾಗ, ಸೇವಕಿ ತನಗಾಗಿ ಎರಡು ರೊಟ್ಟಿಗಳನ್ನು ಇರಿಸಿಕೊಂಡಿದ್ದಳು. ಒಡತಿಯ ಹತ್ತಿರ ಮರಳಿ ಬಂದು, ತನ್ನ ತಪ್ಪನ್ನು ಒಪ್ಪಿಕೊಂಡಳು. ಒಡತಿ, ಈಗಾಗಲೇ ಇದ್ದ ಹದಿನೆಂಟು ರೊಟ್ಟಿಗಳಿಗೆ ಇನ್ನೆರಡು ಸೇರಿಸಿ, ರಬಿಯಾಗೆ ಮತ್ತೆ ಕಳಿಸಿಕೊಟ್ಟಳು.

ರಬಿಯಾ ಮತ್ತೆ ರೊಟ್ಟಿಗಳನ್ನು ಎಣಿಸಿದಳು. ಈಗ ಇಪ್ಪತ್ತು ರೊಟ್ಟಿಗಳಿದ್ದವು. ಅದನ್ನು ಅವಳು ಸ್ವೀಕರಿಸಲು ಒಪ್ಪಿದಳು. "ಎಲ್ಲವೂ ಸರಿಯಾಗಿವೆ. ನಿನ್ನ ಒಡತಿ ನನಗಾಗಿ ಕಳಿಸಿದ ರೊಟ್ಟಿಗಳು ಇವೇ" ಎಂದು ಹೇಳಿದಳು. ಹಸಿದಿದ್ದ ಇಬ್ಬರು ಅತಿಥಿಗಳಿಗೆ ಅವುಗಳನ್ನು ತಿನ್ನಲು ಕೊಟ್ಟಳು. ಅವರಿಬ್ಬರೂ ಆಶ್ಚರ್ಯಪಡುತ್ತ ಊಟಮಾಡಿದರು. ನಂತರ "ಇದರ ರಹಸ್ಯವೇನು?" ಎಂದು ರಬಿಯಾಳನ್ನು ಕೇಳಿದರು. ಅದಕ್ಕೆ ಅವಳು ಹೀಗೆ ಹೇಳಿದಳು: "ನೀವು ಬಂದಾಗ ನಿಮಗೆ ಬಹಳ ಹಸಿವಾಗಿತ್ತು ಎಂದು ನನಗೆ ಗೊತ್ತಿತ್ತು. ಆಗ ನಾನು ನನಗೆ ನಾನೇ ಹೇಳಿಕೊಂಡೆ, 'ಈ ಸನ್ಮಾನ್ಯ ಅತಿಥಿಗಳಿಗೆ ಬರೀ ಎರಡು ರೊಟ್ಟಿಗಳನ್ನು ಕೊಡುವುದೇ?' ಅಷ್ಟು ಹೊತ್ತಿಗೆ ಭಿಕ್ಷುಕ ಬಂದ. ಅವನಿಗೆ, ಇದ್ದ ಎರಡು ರೊಟ್ಟಿಗಳನ್ನು ಕೊಟ್ಟು ಕಳಿಸಿದೆ. ನಂತರ ಸರ್ವಶಕ್ತನಾದ ಭಗವಂತನನ್ನು ಹೀಗೆ ಪ್ರಾರ್ಥಿಸಿದೆ: ' ಓ ಪ್ರಭು! ನೀನು ಹತ್ತುಪಾಲು ಫಲವನ್ನು ಕೊಡುತ್ತೀಯಂತೆ. ಇದನ್ನು ನಾನು ದೃಢವಾಗಿ ನಂಬಿದ್ದೇನೆ. ನನ್ನಲ್ಲಿದ್ದ ಎರಡು ರೊಟ್ಟಿಗಳನ್ನು ಭಿಕ್ಷುಕನಿಗೆ ಕೊಟ್ಟಿರುವೆ. ಈಗ ನೀನು ಇಪ್ಪತ್ತು ರೊಟ್ಟಿಗಳನ್ನು ಫಲರೂಪವಾಗಿ ಕಳಿಸಿಕೊಡಬೇಕು" ಎಂದು. ಅಷ್ಟೊತ್ತಿಗೆ ಹದಿನೆಂಟು ರೊಟ್ಟಿಗಳು ಬಂದವು. ಆಗ ನಾನು ಎಣಿಸಿದೆ, 'ಏನೋ ತಪ್ಪಾಗಿರಬಹುದು ಅಥವಾ ಆ ರೊಟ್ಟಿಗಳು ನನಗಾಗಿ ಕಳಿಸಿದ್ದಲ್ಲದಿರಬಹುದು' ಎಂದು. ಉಳಿದಿದ್ದು ನಿಮಗೇ ಗೊತ್ತು!!"

(ಇಂಟರ್‌ನೆಟ್ ನಿಂದ)

## ವಿದ್ಯಾರ್ಥಿಪ್ರಭ

### ಒಂದು ಚಿಕ್ಕ ಉಡುಗೊರೆ

ಹಿನ್ನೆಲೆ: ಭಾನುವಾರ ಬೆಳಗ್ಗೆ ಕೃಷ್ಣ ಕೊಠಡಿಯನ್ನು ಸ್ವಚ್ಛಗೊಳಿಸುತ್ತಿದ್ದ. ಮೇಜಿನ ಮೇಲೆ ಮತ್ತು ಬೀರುವಿನಲ್ಲಿ ಶಾಲೆಯ ಪುಸ್ತಕಗಳನ್ನೂ ಕಥೆಪುಸ್ತಕಗಳನ್ನೂ ಓರಣವಾಗಿ ಜೋಡಿಸಿಟ್ಟ. ಕಸ ಗುಡಿಸುತ್ತಿರುವಾಗ, ಮಂಚದ ಕೆಳಗಿರುವ ರಟ್ಟಿನ ಪೆಟ್ಟಿಗೆ ಕಣ್ಣಿಗೆ ಬಿತ್ತು. ಹೌದು, ಅದು ಅಣ್ಣ ದಿನೇಶನ ಪೆಟ್ಟಿಗೆ. ತುಂಬ ಜಾಣನಾಗಿದ್ದ ಅವನು ಈಗ ಬೆಂಗಳೂರಿನಲ್ಲಿ ಉನ್ನತ ಅಧ್ಯಯನ ನಡೆಸುತ್ತಿದ್ದಾನೆ. ಅದರಲ್ಲಿದ್ದ ಪುಸ್ತಕಗಳನ್ನು ಎತ್ತಿದ. ಒಂದು ಪುಸ್ತಕದಿಂದ ಒಂದು ಕಾಗದ ಕೆಳಗೆ ಬಿತ್ತು. ಅದು ತನ್ನ ಅಣ್ಣ ದಿನೇಶ್‌ಗೆ ಗೋವಿಂದಪ್ಪ ಮಾಸ್ತರರು ಬರೆದಿದ್ದ ಪತ್ರ. ಕೃಷ್ಣ ಕುತೂಹಲದಿಂದ ಪತ್ರವನ್ನು ಓದಲು ಪ್ರಾರಂಭಿಸಿದ: (ನೀವೂ ಓದುತ್ತೀರಾ?!)

ಪ್ರಿಯ ದಿನೇಶ್,

**"ಯಾವುದೇ ಕೆಲಸವಿರಲಿ, ಅದರ ಯಶಸ್ಸು ಮನಸ್ಸಿನ ಏಕಾಗ್ರತೆಯನ್ನು ಅವಲಂಬಿಸಿರುತ್ತದೆ. ಮನಸ್ಸನ್ನು ಕೇಂದ್ರೀಕರಿಸುವುದರಿಂದ ಮಾತ್ರ ಹೊರಗಿನ ಅಥವಾ ಆಂತರಿಕ ಜಗತ್ತಿನ ಬಗೆಗಿನ ಜ್ಞಾನವನ್ನು ಪಡೆಯಲು ಸಾಧ್ಯ. ಧನಸಂಪಾದನೆಯಿರಲಿ, ದೇವತಾರಾಧನೆಯೇ ಇರಲಿ, ಮನಸ್ಸಿನ ಏಕಾಗ್ರತೆಯನ್ನು ಹೆಚ್ಚಿಸಿದಷ್ಟೂ ಯಶಸ್ಸು ಸುಲಭವಾಗುತ್ತದೆ."** – ಸ್ವಾಮಿ ವಿವೇಕಾನಂದರ ಈ ಮಾತುಗಳು ಮನಸ್ಸಿನ ಏಕಾಗ್ರತೆಯ ಬಗ್ಗೆ ನಿನಗಿರುವ ಎಲ್ಲ ಸಂಶಯಗಳನ್ನೂ ದೂರಮಾಡಿಬಿಡುತ್ತವೆ. ಒಳ್ಳೆಯ ವಿದ್ಯಾರ್ಥಿಯೆನಿಸಲು ಮನಸ್ಸನ್ನು ಒಟ್ಟುಗೂಡಿಸುವುದನ್ನು ತಿಳಿದಿರುವುದು ಅತ್ಯಂತ ಆವಶ್ಯಕ. ನಾಳೆ ದೊಡ್ಡವನಾಗಿ, ಉದ್ಯೋಗಕ್ಕೆ ಸೇರಿ, ಜವಾಬ್ದಾರಿಯುತ ಪ್ರಜೆಯಾಗುತ್ತೀಯೆ; ಸಮಾಜದ ಅವಿಭಾಜ್ಯ ಸದಸ್ಯನಾಗುತ್ತೀಯೆ. ಹೀಗಾಗಲು ಮನಸ್ಸಿನ ಏಕಾಗ್ರತೆ ಅಗತ್ಯ. ಉನ್ನತವಾದ ನಿಸ್ವಾರ್ಥ ಗುರಿಯೊಂದು ನಿನ್ನ ಮನಸ್ಸಿನಲ್ಲಿರಲಿ. ಹೇಳಿದರೆ ಇತರರು ನಗಬಹುದು. ಆದರೆ ಅದಕ್ಕೆ ಅಂಟಿಕೊಂಡು ಏಕಾಗ್ರಚಿತ್ತದಿಂದ ಮುಂದುವರಿ. ಎಂತಹ ಗುರಿ? ಉದಾಹರಣೆಗೆ, "ನಾನು ವೈದ್ಯನಾಗಿ ಹಳ್ಳಿಯ ಜನರಿಗೆ ಶುಚಿತ್ವವನ್ನೂ ಆರೋಗ್ಯಪಾಲನೆಯನ್ನೂ ಬೋಧಿಸುತ್ತೇನೆ", "ನಾನು ಇಂಜಿನಿಯರ್ ಆಗಿ, ಬಡವರೂ ಕಟ್ಟಿಕೊಳ್ಳಬಹುದಾದ ಮನೆಗಳ ವಿನ್ಯಾಸ ಮಾಡುತ್ತೇನೆ", "ನಾನು ವಿಜ್ಞಾನಿಯಾಗಿ, ಜನಸಾಮಾನ್ಯರೂ ಸುಲಭಬೆಲೆಯಲ್ಲಿ ಕೊಳ್ಳಬಹುದಾದ, ಭಯಾನಕ ರೋಗಗಳಿಗೆ ಪರಿಹಾರವಾಗುವ ಔಷಧಿಗಳನ್ನು ಅನ್ವೇಷಿಸುತ್ತೇನೆ"– ಇಂತಹ ನಿಸ್ವಾರ್ಥ ಧ್ಯೇಯಗಳಿದ್ದರೆ ಮಾತ್ರ ಮನಸ್ಸನ್ನು ಒಟ್ಟುಗೂಡಿಸಿ ಗುರಿಗಳನ್ನು ಸಾಧಿಸಲು ಸಾಧ್ಯ.

ರಂಜಿತಾ ಶೆಣೈ ಬಗ್ಗೆ ನಿನಗೆ ಗೊತ್ತಿಲ್ಲವೆ? ಇಲ್ಲಿ ಅವಳು ಕೊಳಚೆಪ್ರದೇಶದ ಜನರಿಗಾಗಿಯೇ ಶಾಲೆಯೊಂದನ್ನು ಯಶಸ್ವಿಯಾಗಿ ನಡೆಸುತ್ತಿದ್ದಾಳೆ. ಅವಳ ಕಥೆ ಕೇಳು. ಅನೇಕ ವರ್ಷಗಳ ಹಿಂದೆ ಅವಳು ನನ್ನ ವಿದ್ಯಾರ್ಥಿಯಾಗಿದ್ದಳು. ಆಗ ನೀನಿನ್ನೂ ಹುಟ್ಟಿರಲಿಲ್ಲ. ಅವಳೂ ನೀನು ಕೇಳಿದ್ದ ಪ್ರಶ್ನೆಯನ್ನೇ ಕೇಳಿದ್ದಳು: "ಮನಸ್ಸಿನ ಏಕಾಗ್ರತೆಯನ್ನು ಸಾಧಿಸುವುದು ಹೇಗೆ?" ಅದಕ್ಕೆ ನಾನು ಹೀಗೆ ಉತ್ತರಿಸಿದ್ದೆ: " ಜೀವನದಲ್ಲಿ ಮಹಾನ್ ಧ್ಯೇಯವೊಂದನ್ನು ಇರಿಸಿಕೊಳ್ಳಬೇಕು." ಅವಳು ಹೇಳಿದಳು: "ಕೊಳಚೆಪ್ರದೇಶದ ನಿವಾಸಿಗಳಿಗಾಗಿ ಏನಾದರೂ ಮಾಡಬೇಕು ಎನ್ನುವುದೇ ನನ್ನ ಜೀವನದ ಉದ್ದೇಶ." ನಾನು ಹೇಳಿದೆ: " ಹೌದೇ? ಅವರಿಗಾಗಿ ಏನು ಮಾಡುತ್ತೀಯೆ?" ರಂಜಿತಾ ಹೇಳಿದಳು: "ಅವರಿಗಾಗಿ ನಾನು ಒಂದು ಶಾಲೆಯನ್ನು ತೆರೆಯುತ್ತೇನೆ, ಸಮಾಜ ತಿರಸ್ಕರಿಸಿರುವ ಕೊಳೆಗೇರಿಯ ಮಕ್ಕಳು ಡಾಕ್ಟರ್‌ಗಳೂ ಇಂಜಿನಿಯರ್‌ಗಳೂ ಆಗುವುದನ್ನು ನೋಡುವ ಹಂಬಲ ನನ್ನದು." ನನಗೆ ಆಗ ತುಂಬ ಸಂತೋಷವಾಯಿತು. ಇಷ್ಟೊಂದು ಚಿಕ್ಕ ಹುಡುಗಿ! ಆದರೆ ಎಂತಹ ದೊಡ್ಡ ಕನಸು ಅವಳಿಗೆ! ನಾನಾಗ ಅವಳನ್ನು ಕೇಳಿದೆ, "ಶಾಲೆಯನ್ನು ಆರಂಭ ಮಾಡಲು ಏನು ಬೇಕು?" "ದುಡ್ಡು." "ಅಷ್ಟು ಸಾಕೇ?" ಆಗ ರಂಜಿತಾ ಹೇಳಿದಳು: "ಊಹುಂ, ಮಕ್ಕಳಿಗೆ ಕಲಿಸುವುದು ಹೇಗೆ ಎಂದೂ ತಿಳಿದಿರಬೇಕು. ಅದಕ್ಕಾಗಿ ಮೊದಲು ನಾನು ಶಿಕ್ಷಕ ತರಬೇತಿಯನ್ನು ಪಡೆದುಕೊಳ್ಳುತ್ತೇನೆ. ನಂತರ ಸ್ನೇಹಿತರನ್ನು ಕಲೆಹಾಕುತ್ತೇನೆ. ಉದಾರಿಗಳಾದ ಶ್ರೀಮಂತರ ಬಳಿ ಹೋಗಿ, ನನ್ನ ಈ ಕನಸನ್ನು ತಿಳಿಸಿ, ಅವರಿಂದ ಧನಸಹಾಯ ಪಡೆಯುತ್ತೇನೆ. ಖಂಡಿತವಾಗಿ ನನ್ನ ಕನಸು ನನಸಾಗುತ್ತದೆ." ಅಬ್ಬಾ, ಎಂತಹ ಆತ್ಮವಿಶ್ವಾಸ ಇವಳದು! ಈ ಧ್ಯೇಯಸಾಧನೆಗಾಗಿ ಅವಳು ಏಕಾಗ್ರ ಮನಸ್ಸಿನಿಂದ ಮುಂದುವರಿದಳು. ಹೈಸ್ಕೂಲ್ ಶಿಕ್ಷಣ ಮುಗಿಸಿ, ಕಾಲೇಜಿಗೆ ಹೋದಳು. ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡಿ, ಶಿಕ್ಷಕ ತರಬೇತಿಯನ್ನು ಪಡೆದುಕೊಂಡಳು. ಈಗ ನೋಡು, ಕೊಳಚೆ ಪ್ರದೇಶದ ಜನರ ದೃಷ್ಟಿಯಲ್ಲಿ, ಅವಳು ಸಾಕ್ಷಾತ್ ಸರಸ್ವತಿದೇವಿ ಎನ್ನಿಸಿದ್ದಾಳೆ. **ಆದುದರಿಂದ ನೀನು ಭವಿಷ್ಯದಲ್ಲಿ ಏನಾಗಬೇಕೆಂದು ಧ್ಯೇಯವನ್ನಿಟ್ಟುಕೊಳ್ಳುತ್ತೀಯೋ, ಅದಕ್ಕೆ ಸಂಬಂಧಪಟ್ಟ ಹಾಗೆ ಈಗ ಏನು ಮಾಡಬೇಕೋ ಆ ಕಾರ್ಯಗಳಲ್ಲಿ, ಇಂದಿನಿಂದಲೇ ನೀನು ನಿನ್ನನ್ನು ತೊಡಗಿಸಿಕೊಳ್ಳಬೇಕು.**

ಪ್ರತಿಯೊಬ್ಬ ವಿದ್ಯಾರ್ಥಿಯೂ ಅಪೂರ್ವ ಎಂದು ನಾನು ತರಗತಿಗಳಲ್ಲಿ ಅನೇಕ ಸಲ ಹೇಳಿದ್ದು ನಿನಗೆ ನೆನಪಿರಬಹುದು. ಅಂತಹ, ನನ್ನ ಮನಸ್ಸಿನಲ್ಲಿ ಸದಾ ಉಳಿದಿರುವ ಒಬ್ಬ ಪ್ರತಿಭಾಶಾಲಿಯ ಬಗ್ಗೆ ನಾನಿಲ್ಲಿ ಹೇಳಲೇ ಬೇಕಾಗುತ್ತದೆ. ಅವನ ಹೆಸರು ಗೋಪೀನಾಥ. ಅವನು ಶಂಕರನಾರಾಯಣ ಅವರ ಹಿರಿಯ ಮಗ. ಐ.ಐ.ಟಿ. ಪ್ರವೇಶಪರೀಕ್ಷೆಯಲ್ಲಿ ಮೊದಲ ರ‍್ಯಾಂಕ್ ಪಡೆದುಕೊಂಡ. ಭಾರತದಲ್ಲಿ ಮೊದಲಬಾರಿಗೆ ಟೆಲಿ ಮೆಡಿಸಿನ್ (ಉಪಗ್ರಹಗಳ ಸಹಾಯದಿಂದ ದೂರದೂರದ ಪ್ರದೇಶಗಳ ಜನರಿಗೆ ತಜ್ಞವೈದ್ಯರ ಸಮಾಲೋಚನೆಯ ಸೌಲಭ್ಯ) ವಿಧಾನವನ್ನು ಕಂಡುಹಿಡಿದವರಲ್ಲಿ ಅವನೂ ಒಬ್ಬ. ಬಹಳ ವರ್ಷಗಳ ಹಿಂದಿನ ಮಾತು. ಸಂಜೆಯ ಚಳಿಯಲ್ಲಿ ಮಾಮೂಲಿಯಂತೆ ಗಾಳಿಸಂಚಾರ ಮಾಡುತ್ತ ನಂದಾ ಪಾರ್ಕಿನಲ್ಲಿ ಅಡ್ಡಾಡುತ್ತಿದ್ದೆ. ಆಗ ಎಂಟನೇ ಒಂಬತ್ತೋ ಕ್ಲಾಸಿನಲ್ಲಿ ಓದುತ್ತಿದ್ದ ಗೋಪೀನಾಥ ಪಾರ್ಕಿಗೆ ಬಂದು ನನ್ನ ಜೊತೆಯೇ ನಡೆದಾಡಲು ಆರಂಭಿಸಿದ. "ಏನಪ್ಪಾ?" ಎಂದು ಕೇಳಿದೆ. ತುಸು ಹಿಂಜರಿಯುತ್ತ ಅವನು ಹೇಳಿದ: " ಸರ್, ನನಗೆ ಒಂದು ಸಮಸ್ಯೆ ಇದೆ. ಸ್ವಲ್ಪ ಸಹಾಯ ಮಾಡುತ್ತೀರಾ?" "ಹೇಳಪ್ಪಾ, ನೋಡೋಣ" ಎಂದೆ. "ಸರ್, ನನ್ನ ಮಾನಸಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಏನಾದರೂ

ಉಪಾಯ ಇದೆಯೇ?" ನನಗೆ ರೋಮಾಂಚನವಾಯಿತು. ತುಂಬಾ ಸಂತೋಷವೂ ಆಯಿತು. ಯಾರು ಉಜ್ವಲವಾದ ಧ್ಯೇಯವೊಂದನ್ನು ಇರಿಸಿಕೊಂಡು, ಅದನ್ನು ಸಾಧಿಸಲು ತಾವೇನು ಮಾಡಬೇಕೆಂದು ತಿಳಿದಿರುತ್ತಾರೋ ಅವರಿಗೆ ಮಾತ್ರ ಇಂಥ ಸಮಸ್ಯೆ ಎದುರಾಗುತ್ತದೆ. ತಾನು ಇರಿಸಿಕೊಂಡ ಧ್ಯೇಯವನ್ನು ಸಾಧಿಸಲು ಚೆನ್ನಾಗಿ ಅಧ್ಯಯನ ಮಾಡಬೇಕೆಂದು ಗೋಪೀನಾಥನಿಗೆ ಗೊತ್ತಿತ್ತು. ಆದರೆ ಓದುವಾಗ ಅವನಿಗೆ ಬಹುಬೇಗ ಮಾನಸಿಕವಾಗಿ ಆಯಾಸವಾಗುತ್ತಿತ್ತು. ಒಂದು ಗಂಟೆಯಷ್ಟು ಕಾಲ ಓದುವುದೂ ಅವನ ಕೈಲಿ ಆಗುತ್ತಿರಲಿಲ್ಲ. ಬೇಗ ದಣಿವಾಗುತ್ತಿತ್ತು.

ನಾನು ಕೇಳಿದೆ, "ಆಟ ಆಡ್ತೀಯಾ?" ಅವನು ಹೇಳಿದ: "ಭಾನುವಾರ ಅಥವಾ ರಜಾದಿನಗಳಲ್ಲಿ ಮಾತ್ರ." "ನೋಡು, ನೀನು ಕನಿಷ್ಠ ಅರ್ಧಗಂಟೆ ಕಾಲ ಪ್ರತಿದಿನ ಆಟ ಆಡಬೇಕು. ಗೆಳೆಯರ ಜೊತೆಗೆ ಹರಟೆ ಹೊಡೆಯುವ ಅಭ್ಯಾಸ ಇದೆಯೇ?" "ಹೌದು, ಆಗಾಗ ಭೇಟಿಯಾಗಿ ಪಾಠದ ಬಗ್ಗೆ, ಮೇಷ್ಟರು ಕೊಟ್ಟಿರುವ ಟಿಪ್ಪಣಿಗಳ ಬಗ್ಗೆ ಚರ್ಚಿಸುವುದುಂಟು." ಆಗ ನಾನು ಹೇಳಿದೆ, "ನೋಡು, ಗೋಪೀನಾಥ, ಇಂತಹ ಗಂಭೀರ ಚರ್ಚೆಯಿಂದ ಏನೂ ಪ್ರಯೋಜನ ಇಲ್ಲಾ ಕಣೋ. ನೀನು ಹುಡುಗ. ಖುಷಿಯಾಗಿ ಹುಡುಗರೊಡನೆ ಹರಟೆ ಹೊಡೀಬೇಕು." ನಂತರ ಅವನಿಗೆ ಅನೇಕ ಜೋಕ್‌ಗಳನ್ನು ಹೇಳಿ ನಗಿಸಿದೆ. ಆಮೇಲೆ ಮನಸ್ಸನ್ನು ಏಕಾಗ್ರಗೊಳಿಸುವುದು ಹೇಗೆ ಎನ್ನುವುದರ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟೆ: "ನೋಡು, ಗೋಪೀನಾಥ, ಒಂದು ಸಲ ಒಂದೇ ಕೆಲಸವನ್ನು ಮಾಡಬೇಕು. ಕೆಲವರು ಟಿ.ವಿ. ನೋಡುತ್ತ ಊಟಮಾಡುತ್ತಾರೆ. ಓದುತ್ತಿರುವಾಗ ರೇಡಿಯೋ ಕೇಳುತ್ತಾರೆ. ಇದರಿಂದ ಮಾನಸಿಕ ಸಾಮರ್ಥ್ಯ ಬಹು ಬೇಗ ಕುಂದುತ್ತದೆ. ಎಲ್ಲಾ ಸಮಯದಲ್ಲೂ ಒಳ್ಳೆಯ ಆಲೋಚನೆಗಳನ್ನೇ ಮಾಡಬೇಕು. ಸಕಾರಾತ್ಮಕವಾಗಿ ಚಿಂತಿಸುವುದನ್ನು ಕಲಿಯಬೇಕು. ಉದಾಹರಣೆಗೆ, "ನಾನು ಸಮರ್ಥ", "ನನಗೆ ವಿಶೇಷವಾದ ಜ್ಞಾಪಕಶಕ್ತಿ ಇದೆ" ಹೀಗೆ. ಇಂತಹ ಸಕಾರಾತ್ಮಕ ಮನೋಭಾವವನ್ನು ಬೆಳೆಸಿಕೊಳ್ಳುವುದರಿಂದ, ಶ್ರದ್ಧೆ ಮೂಡುತ್ತದೆ.

ಹಾಗೂ ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಉಪದೇಶಿಸಿರುವ ಹಾಗೆ, ಆಹಾರ, ನಿದ್ರೆ ಮತ್ತು ಅಧ್ಯಯನ – ಇವುಗಳನ್ನು ನಿಯತವಾಗಿ, ನಿಯತ ಕಾಲದಲ್ಲಿ ಮಾಡಬೇಕು. ಅವಕ್ಕಾಗಿ ನಿಶ್ಚಿತ ಸಮಯವನ್ನು ಗೊತ್ತುಪಡಿಸಿಕೊಳ್ಳಬೇಕು. ಇವು ಮೂರಕ್ಕೆ ಸರಿಯಾಗಿ ಸಮಯ ಹೊಂದಿಸಿಕೊಂಡು, ಮಿಕ್ಕ ಕೆಲಸಗಳನ್ನು ಆಯಾ ನಿಗದಿತ ಸಮಯಗಳಲ್ಲಿ ಮಾಡಬೇಕು. ಪರೀಕ್ಷೆ ಬಂದಿತು ಎಂದು ಹೇಳಿ, ಆ ಸಮಯದಲ್ಲಿ, ಆಹಾರ, ನಿದ್ರೆ ಮತ್ತು ಅಧ್ಯಯನಗಳ ಕಾಲವನ್ನು ಹೆಚ್ಚುಕಡಿಮೆ ಮಾಡಿಕೊಳ್ಳಬಾರದು. ನಿಗದಿತ ಸಮಯದಲ್ಲಿಯೇ ಇವುಗಳನ್ನು ಮಾಡಬೇಕು. ಯಾವ ಕಾರಣಕ್ಕೂ ಸಮಯವನ್ನು ಬದಲಾಯಿಸಬಾರದು." ಹೀಗೆ ನಾನು ಹೇಳಿದ್ದನ್ನೆಲ್ಲ ಗೋಪೀನಾಥ ಕೇಳಿಸಿಕೊಂಡ. ಅವನು ಪ್ರತಿಭಾವಂತ. ನಾನು ಕೊಟ್ಟ ಸೂಚನೆಗಳಂತೆ ಓದಿದ, ಅದ್ಭುತ ಸಾಧನೆ ಮಾಡಿದ. ಟೆಲಿ ಮೆಡಿಸಿನ್ ಕ್ಷೇತ್ರದಲ್ಲಿ ಅವನ ಸಾಧನೆ ಕ್ರಾಂತಿಕಾರಕವಾದುದು ಎಂದು ಎಲ್ಲರೂ ಈಗ ಅವನನ್ನು ಗುರುತಿಸುತ್ತಾರೆ.

**ಪ್ರಿಯ ದಿನೇಶ್,** ನನಗೆ ನೀನು ಎಂದರೆ ತುಂಬ ಇಷ್ಟ. ಅದಕ್ಕೇ ಈವರೆಗೆ ಯಾರಿಗೂ ಹೇಳದ ಒಂದು ವಿಷಯವನ್ನು ನಿನಗೆ ತಿಳಿಸುತ್ತಿದ್ದೇನೆ. ತುಂಬ ಹಿಂದೆ, ನಾನು ನಿನ್ನಷ್ಟೇ ಚಿಕ್ಕವನಾಗಿದ್ದಾಗ, ಬೆಂಗಳೂರಿನ ಬಸವನಗುಡಿ ರಸ್ತೆಯಲ್ಲಿರುವ ಶ್ರೀರಾಮಕೃಷ್ಣ ಆಶ್ರಮಕ್ಕೆ ಹೋಗುತ್ತಿದ್ದೆ. ಅಲ್ಲಿ ಅನೇಕ ಮೇಧಾವಿ ಸ್ವಾಮೀಜಿಗಳಿದ್ದರು. ಅವರಲ್ಲಿ ಈಗಲೂ ಕೆಲವರ ಜೊತೆಗೆ ನನ್ನ ಸಂಪರ್ಕ ಇದೆ. ಅವರೆಲ್ಲ ನನ್ನೊಂದಿಗೆ ಆತ್ಮೀಯವಾಗಿ ಮಾತನಾಡಿಸುತ್ತಿದ್ದರು. ನಾನು, ಅಲ್ಲಿ ನಡೆಸುತ್ತಿದ್ದ ಬಾಲಕಸಂಘಕ್ಕೂ ಸೇರಿದ್ದೆ. ನೀನೀಗ ನನ್ನನ್ನು ಕೇಳಿದೆಯಲ್ಲ, ಇದೇ ಪ್ರಶ್ನೆಯನ್ನು ಒಮ್ಮೆ ನಾನೂ ಅವರಿಗೆ ಕೇಳಿದ್ದೆ. ಅವರು ಮತ್ತೆ ಮತ್ತೆ ಪ್ರತಿಧ್ವನಿಸುವ ಸ್ವರದಲ್ಲಿ ಹೀಗೆ ಹೇಳಿದ್ದರು: "ಬ್ರಹ್ಮಚರ್ಯವನ್ನು ಪಾಲಿಸು, ಬ್ರಹ್ಮಚರ್ಯವನ್ನು ಪಾಲಿಸು." ಬ್ರಹ್ಮಚರ್ಯವೆಂದರೆ ಇಂದ್ರಿಯಗಳನ್ನೂ ಮನಸ್ಸನ್ನೂ ಹತೋಟಿಯಲ್ಲಿಟ್ಟುಕೊಳ್ಳುವುದು; ಧ್ಯೇಯಸಾಧನೆಗಾಗಿ ಅವುಗಳೆಲ್ಲವರ ಶಕ್ತಿಯನ್ನು ಒಟ್ಟಾಗಿ ಮಾಡಿ, ಏಕಾಗ್ರಗೊಳಿಸುವುದು ಎಂದು ಅವರೇ ನನಗೆ ಹೇಳಿಕೊಟ್ಟರು. ಅದೇ ನಾನೂ ನಿನಗೆ ಹೇಳುವುದು. ಜಾಗರೂಕತೆಯಿಂದಿರು. ನಿನ್ನ ಶಕ್ತಿಯನ್ನು ವ್ಯರ್ಥ ಮಾಡಬೇಡ. **ಮಗೂ, ಜೀವನದಲ್ಲಿ ನಿಸ್ವಾರ್ಥ ಧ್ಯೇಯವೊಂದು ಇರಲಿ. ಆ ಧ್ಯೇಯಸಾಧನೆಗಾಗಿ ಸದ್ಯದ ಕಾರ್ಯಚಟುವಟಿಕೆಗಳನ್ನು ರೂಪಿಸಿಕೋ. ಏಕಾಗ್ರಚಿತ್ತದಿಂದ ಆ ಕೆಲಸಗಳನ್ನು ಸಮರ್ಥವಾಗಿ ಮಾಡು.** ಈ ನನ್ನ ಪತ್ರವನ್ನು ಮುಗಿಸುವ ಮೊದಲು ನಿನಗೊಂದು ಚಿಕ್ಕ ಉಡುಗೊರೆ – **ಪ್ರಾರ್ಥನೆಯ ಉಡುಗೊರೆ.** ಪ್ರತಿ ರಾತ್ರಿ ಮಲಗುವ ಮುನ್ನ ಈ ರೀತಿ ಪ್ರಾರ್ಥಿಸು: **"ದೇವರೇ, ನನ್ನನ್ನು ನಿಜವಾದ ಅರ್ಥದಲ್ಲಿ ವಿದ್ಯಾರ್ಥಿಯನ್ನಾಗಿ ರೂಪಿಸು. ನನ್ನನ್ನು ಚಾರಿತ್ರ್ಯವಂತನನ್ನಾಗಿ ಮಾಡು."**

ಪ್ರೀತಿ ಮತ್ತು ಶುಭಾಶಯಗಳೊಂದಿಗೆ,
**ಗೋವಿಂದಪ್ಪ ಮಾಸ್ತರ್**

**ಆಮೇಲೆ:** ತನ್ನ ಅಣ್ಣನಿಗೆ ಅವರ ಮೇಷ್ಟ್ರು ಬರೆದ ಕಾಗದ ಓದಿ, ಕೃಷ್ಣ ಅದನ್ನು ಗೌರವದಿಂದ ಹಣೆಗೆ ಒತ್ತಿಕೊಂಡ. ಈಗ ಅವನ ಅನೇಕ ಸಂದೇಹಗಳಿಗೆ ಉತ್ತರ ದೊರೆತಿತ್ತು. ಏಕಾಗ್ರತೆಯಿಂದ ಕೊಠಡಿಯನ್ನು ಸ್ವಚ್ಛಮಾಡುವ ಕೆಲಸವನ್ನು ಮುಂದುವರಿಸಿದ.

**ಈ ಪ್ರಶ್ನೆಗಳಿಗೆ ನೀವೇ ಉತ್ತರ ಕಂಡುಕೊಳ್ಳಿ:** **೧. ಏಕಾಗ್ರತೆ ಬೆಳೆಸಿಕೊಳ್ಳಲು ಮೊದಲು ಎಂತಹ ಧ್ಯೇಯ ಇರಿಸಿಕೊಳ್ಳಬೇಕು? ಅದನ್ನು ಸಾಧಿಸಲು ಏನು ಮಾಡಬೇಕು? ೨. ರಂಜಿತಾ ಶೆಣೈ ಮತ್ತು ಗೋಪೀನಾಥ ತಮ್ಮ ಗುರಿಗಳನ್ನು ಹೇಗೆ ಸಾಧಿಸಿದರು? ೩. ಮಾನಸಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಮೇಷ್ಟರು ಗೋಪೀನಾಥನಿಗೆ ನೀಡಿದ ಸಲಹೆಗಳಾವುವು? (ಮುಂದಿನ ತಿಂಗಳು ಕಲಿಯುವ ಗುಣ: ಹೃದಯವಂತಿಕೆ)**

**ಕೃಪೆ:** *How shall I be ?*, Pub: Ramakrishna Mission, Belur Math, Howrah WB 711 202 **(ಸಂಗ್ರಹಾನುವಾದ: ಶ್ರೀ ಶಂಸ ಐತಾಳ)**

*(ವಿದ್ಯಾರ್ಥಿಗಳೆ, ಈ ಅಂಕಣದ ಬಗ್ಗೆ ನಿಮ್ಮ ಅನಿಸಿಕೆಗಳನ್ನು ಬರೆದು ಕಳುಹಿಸಿ– ಸಂ.)*